**OS-44/2019**
**PW-1**

ಇಂದು ದಿ:**23-06-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ **ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿಯ ಪರ : ಶ್ರೀ ಕೆ.ಟಿ.ಪಿ ವಕೀಲರಿಂದಃ**

ವಿಭಾಗ ಪತ್ರದ ಪ್ರಕಾರ ಖಾತಾ ವರ್ಗಾವಣೆಯಾಗಿದೆ ಎಂದರೆ ಸರಿ. ಖಾತಾ ವರ್ಗಾವಣೆಯಾದ ನಂತರ ಈ ದಾವೆಯನ್ನು ಸಲ್ಲಿಸಿದ್ದೇನೆಂದರೆ ಸರಿ. ದಾವಾ ಸರ್ವೆ ನಂಬರ್ 20/03 ರಲ್ಲಿ ಹಿಸ್ಸೆಯ ಪ್ರಕಾರ ಖಾತಾ ವರ್ಗಾವಣೆ ಮಾಡಿಕೊಂಡು ನಮ್ಮ ನಮ್ಮ ಹಿಸ್ಸೆಗೆ ಬಂದ ಆಸ್ತಿಗಳನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿ. ಎಂ.ಆರ್ ನಂಬರ್-1617/18 ರ ಪ್ರಕಾರ ನನ್ನ ಹಿಸ್ಸೆಗೆ 12 ಗುಂಟಾ ಜಮೀನು, ಮೊದಲನೇ ಹೆಂಡತಿಗೆ 10 ಗುಂಟಾ ಜಮೀನು, 3 ನೇ ವಾದಿಗೆ 10 ಗುಂಟಾ ಜಮೀನು, 4 ನೇ ವಾದಿಗೆ 10 ಗುಂಟಾ ಜಮೀನು, 5 ನೇ ವಾದಿಗೆ 30 ಗುಂಟಾ ಜಮೀನು. ಪ್ರತಿವಾದಿಯನ್ನು ಹೊರತುಪಡಿಸಿ ನಾನು ಮತ್ತು ಉಳಿದ ವಾದಿಯರು ಒಂದೇ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ಸರ್ವೆ ನಂಬರ್ 20/03 ಈಗ ಅಸ್ತಿತ್ವದಲ್ಲಿ ಉಳಿದಿರುವುದಿಲ್ಲ. ಸರ್ವೆ ನಂಬರ್ 20/03 ರಲ್ಲಿ 3 ಎಕರೆ 2 ಗುಂಟಾ ಜಮೀನು ಇರುವುದಿಲ್ಲ ಎಂದರೆ ಸರಿ. 4 ನೇ ವಾದಿಯ ಹೆಸರಿಗೆ 2 ಗುಂಟಾ ಜಮೀನಿಗೆ ದಾನ ಪತ್ರ ಮಾಡಿಕೊಟ್ಟಿದ್ದೇನೆ. ಅದರ ಸರ್ವೆ ನಂಬರ್ 20/13 ಎಂದರೆ ಸರಿ . 4 ನೇ ವಾದಿಯ ಹೆಸರಿಗೆ ಖಾತಾ ವರ್ಗಾವಣೆಯಾಗಿದೆ ಎಂದರೆ ಸರಿ. 2 ನೇ ವಾದಿಯು ತನ್ನ ಹಿಸ್ಸೆಗೆ ಬಂದ 0.1.8 ಗುಂಟಾ ಜಾಗವನ್ನು ಹನುಮಂತಪ್ಪ ಹೆಚ್ ಬಿನ್ ಹಾಲಪ್ಪ ಎನ್ನುವವರಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿ. ಸದರಿಯವರ ಹೆಸರಿಗೆ ಖಾತಾ ವರ್ಗಾವಣೆಯಾಗಿದೆ ಎಂದರೆ ಸರಿ. ಖರೀದಿದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ. 5 ನೇ ವಾದಿಯು ತನ್ನ ಹಿಸ್ಸೆಗೆ ಬಂದ 30 ಗುಂಟಾ ಜಮೀನಿನಲ್ಲಿ 14 ಗುಂಟಾ ಜಮೀನನ್ನು ಮಾರಾಟ ಮಾಡಿದ್ದಾಳೆಂದರೆ ಸರಿ. ಸದರಿ ಜಮೀನನ್ನು ಭರಮಪ್ಪ ಬಿನ್ ನಾಗಪ್ಪ ಎನ್ನುವವರಿಗೆ ಮಾರಾಟ ಮಾಡಿದ್ದಾಳೆಂದರೆ ಸರಿ. 5 ನೇ ವಾದಿಯು 4 ಗುಂಟಾ ಜಮೀನನ್ನು ಕಾಂತೇಶಕುಮಾರ್ ಎನ್ನುವವರಿಗೆ ಮಾರಾಟ ಮಾಡಿದ್ದಾಳೆಂದರೆ ಸರಿ. 2 ನೇ ವಾದಿಯು ವಸುಂದರ ಎನ್ನುವವರಿಗೆ 1 ಗುಂಟಾ ಜಮೀನನ್ನು ಮಾರಾಟ ಮಾಡಿದ್ದಾಳೆಂದರೆ ಸರಿ. 2 ನೇ ವಾದಿಯು 0.1.12 ಗುಂಟಾ ಜಮೀನನ್ನು, ರಾಜೇಂದ್ರಪ್ಪ. ಟಿ ಎನ್ನುವವರಿಗೆ ಮಾರಾಟ ಮಾಡಿದ್ದಾಳೆಂದರೆ ಸರಿ. ಎಲ್ಲಾ ಖರೀದಿದಾರರ ಹೆಸರಿನಲ್ಲಿ ಖಾತಾ ವರ್ಗಾವಣೆಯಾಗಿವೆ ಎಂದರೆ ಸರಿ. 2017 ರಲ್ಲಿ ಆದ ವಿಭಾಗ ಸರಿ ಇರುವುದಿಲ್ಲ ಎಂದು ದಾವಾ ಸಲ್ಲಿಸಿದ್ದೇನೆ. ಈ ದಾವೆ ಚಾಲ್ತಿಯಲ್ಲಿದ್ದಾಗಲೇ ನಾನು ಮತ್ತು ಉಳಿದ ವಾದಿಯರು ನಮಗೆ ಬಂದ ಹಿಸ್ಸೆಗಳನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿ. 27X29 ವಿಸ್ತೀರ್ಣದ ಮನೆಯನ್ನು ಈ ದಾವಾ ಸಲ್ಲಿಸಿದ ನಂತರ ಕಟ್ಟಿಸಿದ್ದೇವೆ ಎಂದರೆ ಸರಿ. 1 ಆರ್.ಸಿ.ಸಿ ಮನೆ ಮತ್ತು 1

ಅಂಚಿನ ಮನೆ ಮತ್ತು 2 ಅಳಿ ಮನೆಗಳಿದ್ದವು ಎಂದರೆ ಸರಿ. ಸದರಿ ಮನೆಗಳನ್ನು 2017 ರ ವಿಭಾಗ ಪತ್ರದಲ್ಲಿ ಸೇರಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ 60-70 ತೆಂಗಿನ ಮರಗಳಿದ್ದವು ಎಂದರೆ ಸರಿ. ಸದರಿ ಮರಗಳನ್ನು ಕಡಿಸಿ ಮಾರಿಸಿದ್ದೇನೆಂದರೆ ಸರಿ. ಪ್ರತಿವಾದಿಯ ಮಧುವೆಯನ್ನು 2011 ರಲ್ಲಿ ಮಾಡಿದ್ದೇನೆ. 1 ನೇ ಪ್ರತಿವಾದಿಯ ಹೆಂಡತಿಯ ಮನೆಯವರು ಮಧುವೆಯ ಖರ್ಚಿಗೆ ರೂ.1 ಲಕ್ಷ ಗಳನ್ನು ಕೊಟ್ಟಿದ್ದಾರೆ ಮತ್ತು ಮಧುವೆ ಮಾಡಿಕೊಟ್ಟಿದ್ದಾರೆಂದರೆ ಸರಿ. 5 ನೇ ವಾದಿ ಪ್ರೇಮ ವಿವಾಹವಾಗಿದ್ದರು ನಂತರ ವಿಚ್ಚೇದನ ಪಡೆದಿದ್ದಾರೆ. 5 ನೇ ವಾದಿ ತನ್ನ ಹಿಸ್ಸೆಗೆ ಬಂದ ಆಸ್ತಿಯನ್ನು, ನನ್ನ ಹೆಸರಿಗೆ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿ. ನಂತರ ಅದನ್ನು ರದ್ದು ಮಾಡಿಸಿದ್ದೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. 5 ನೇ ವಾದಿಯ ಹೆಸರಿನಲ್ಲಿ ನಾನು ಹಿಸ್ಸೆ ಪಡೆದಿದ್ದೇನೆ ಎನ್ನುವುದು ಸರಿಯಲ್ಲ. ಪ್ರತಿವಾದಿ ಮಧುವೆಯಾದ ನಂತರ ನಮ್ಮ ಮನೆಯಲ್ಲಿ 1 ವರ್ಷಗಳ ಕಾಲ ವಾಸವಾಗಿದ್ದರು. 4 ನೇ ವಾದಿ ಮತ್ತು ಪ್ರತಿವಾದಿಯ ಹೆಂಡತಿಗೆ ಹೊಂದಾಣಿಕೆಯಾಗದೇ ಇರುವುದರಿಂದ, ಪ್ರತಿವಾದಿ ಮನೆ ಬಿಟ್ಟು ಹೋಗಿದ್ದಾರೆಂದರೆ ಸರಿಯಲ್ಲ. ಅವರೇ ಮನೆ ಬಿಟ್ಟು ಹೋಗಿದ್ದಾರೆ. ನಮ್ಮ ಮನೆಯಲ್ಲಿ ನನ್ನ ಕಿರಿಯ ಹೆಂಡತಿ ಮಂಜುಳ ನಿರ್ಧಾರ ಅಂತಿಮ ಎನ್ನುವುದು ಸರಿಯಲ್ಲ. 2016 ರಿಂದ 2017 ರವರೆಗೆ ಪ್ರತಿವಾದಿಯನ್ನು ಯಾವ ರೀತಿ ಹಿಸ್ಸೆ ಮಾಡಬೇಕೆಂದು ಮಾತುಕತೆಯಾಗುತ್ತಿತ್ತು ಎನ್ನುವುದು ಸರಿಯಲ್ಲ. ಬೋಜಪ್ಪ ಮತ್ತು ರವಿ ಕುಮಾರ ಎನ್ನುವವರ ಸಮಕ್ಷಮ ವಿಭಾಗದ ಮಾತುಕತೆಯಾಗಿರುತ್ತದೆ ಎನ್ನುವುದು ಸರಿಯಲ್ಲ. ಸದರಿಯವರ ಹಿಸ್ಸಾ ಪತ್ರಕ್ಕೆ ಸಹಿ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ಹಿಸ್ಸಾ ಪತ್ರವನ್ನು ನಾನೇ ಮಾಡಿಸಿದ್ದೇನೆ ಎನ್ನುವುದು ಸರಿಯಲ್ಲ. ಪ್ರತಿವಾದಿ ನಾನು ಹೇಳಿದ ಮೇರೆಗೆ ಹಿಸ್ಸಾ ಪತ್ರಕ್ಕೆ ಸಹಿ ಮಾಡಿದ್ದಾನೆ ಎನ್ನುವುದು ಸರಿಯಲ್ಲ. ನಾನು, ನನ್ನ 2 ನೇ ಹೆಂಡತಿ ಮಂಜುಳ ಮತ್ತು ಮಗಳು ವೈಭವ್ ಹಾಗೂ 1 ನೇ ಪ್ರತಿವಾದಿ ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತೇವೆಂದರೆ ಸರಿ. ಪ್ರತಿವಾದಿ ಮಧುವೆಯಾಗಿ 3 ವರ್ಷ ಜೊತೆಯಲ್ಲಿದ್ದರು ಎನ್ನುವುದು ಸರಿಯಲ್ಲ. ನಂತರ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿ ದಾವಣಗೆರೆಯಲ್ಲಿ ವಾಸವಾಗಿದ್ದರು ಎಂದು ಉತ್ತರಿಸುತ್ತಾರೆ. ಪ್ರತಿವಾದಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಅಡಿಗೆ ಕೆಲಸ ಮಾಡುತ್ತಾನೆ. ಅಡಿಗೆ ಕೆಲಸ ಕಾಯಂ ಇಲ್ಲ ಎನ್ನುವುದು ಸರಿಯಲ್ಲ. ಪ್ರತಿವಾದಿಗೆ ಎಷ್ಟು ಸಂಬಳ ಬರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಪ್ರತಿವಾದಿ ದಿನಗೂಲಿ ನೌಕರನಾಗಿದ್ದು, ಆತನಿಗೆ ಒಂದು ವಾಸಕ್ಕೆ ಮನೆ ಕೊಡಲು ಕೇಳಿದ್ದರಿಂದ ನಾನು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಪ್ರತಿವಾದಿಗೆ ಹಳೆ ಮನೆ ಕೊಡಬೇಕೆಂದು ಮಾತುಕತೆಯಾಗಿತ್ತು ಎನ್ನುವುದು ಸರಿಯಲ್ಲ. ನಾನು 3 ಮನೆಗಳನ್ನು ಮತ್ತು ಬಹುಪಾಲು ಜಮೀನನ್ನು ನಾನೇ ಇಟ್ಟುಕೊಂಡು ಪ್ರತಿವಾದಿಯ ವಿರುದ್ದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ. ಪ್ರತಿವಾದಿ ವಿಭಾಗದ ನಂತರ ತನ್ನ ಜಮೀನನಲ್ಲಿ ಬೋರ್ ವೆಲ್ ಅಳವಡಿಸಿಕೊಂಡಿದ್ದಾನೆ ಎಂದರೆ ಸರಿ. ಪ್ರತಿವಾದಿಯ ಹೆಂಡತಿಯ 25 ಗ್ರಾಂ ಭಂಗಾರ

**OS-44/2019**
**PW-1**

ನನ್ನ 2 ನೇ ಹೆಂಡತಿ ಮಂಜುಳ ಹತ್ತಿರ ಇದೆ ಎನ್ನುವುದು ಸರಿಯಲ್ಲ. ನಾನು, ಈ ದಾವಾ ಹಾಕುವುದಕ್ಕಿಂತ ಮೊದಲೇ ನನ್ನ ಹಿಸ್ಸೆಗೆ ಬಂದ ಆಸ್ತಿಗಳನ್ನು ಮಾರಾಟ ಮಾಡಬೇಕೆಂದು ನಿರ್ಧಾರ ಆಗಿದ್ದು, ರಸ್ತೆಯ ಸಲುವಾಗಿ ಈ ದಾವಾ ಸಲ್ಲಿಸಿದ್ದೇನೆಂದರೆ ಸರಿ. ನಿ.ಪಿ-1 ವಿಭಾಗ ಪತ್ರವನ್ನು ಎಲ್ಲರೂ ಒಪ್ಪಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವಾ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿದ ಸಂಗತಿಗಳು ಸುಳ್ಳು ಎನ್ನುವುದು ಸರಿಯಲ್ಲ. ನಾನು ದಾವಾ ಸಲ್ಲಿಸಿದ ನಂತರ ನಮ್ಮ ಹಿಸ್ಸೆಯ ಆಸ್ತಿಗಳನ್ನು ಮಾರಾಟ ಮಾಡಿರುವುದರಿಂದ ದಾವಾ ಊರ್ಜಿತವಾಗುವುದಿಲ್ಲ ಎನ್ನುವುದು ಸರಿಯಲ್ಲ. ಹಿಸ್ಸಾ ಪತ್ರ ಸರಿಯಾಗಿದ್ದರೂ ಸರಿಯಾದ ಹಿಸ್ಸೆಯಾಗಿಲ್ಲ ಎಂದು ಸುಳ್ಳು ದಾವಾ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**